II. CALLING ATTENTION TO MATTERS OF URGENT PUBLIC IMPORTANCE.

re :—*Death of a Harijan Student of a Junior College, Puttur.*

SRI P. F. RODRIGUES.—Sir, I call the attention of the Chief Minister to the death of a Harijan student of a Junior College, Puttur who was an inmate of Government Hostel at Puttur.

SRI R. GUNDU RAO.—Sir, I wish to make the following statement:

ದಿನಾಂಕ ೬-೩-೧೯೮೧ ರಂದು ಪುತ್ತೂರು ಪೋಲೀಸರಿಗೆ ಸರ್ಕಾರಿ ಶೆಡ್ಯೂಲ್ಡ್ ಕ್ಯಾಸ್ಟ್ ಗರ್ಲ್ಸ್ ಹಾಸ್ಟೆಲ್, ಪುತ್ತೂರು ಇದರ ಪೇಲ್ವಿಚಾರಕರಿಂದ ಆ ಹಾಸ್ಟೆಲಿನಲ್ಲಿ ವಾಸವಾಗಿದ್ದ ಕುಮಾರಿ ಸೀತಾ ಎಂಬುವಳು ದಿನಾಂಕ ೫-೩-೧೯೮೧ ಮುಂಜಾನೆಯಿಂದ ಕಾಣೆಯಾಗಿದ್ದಾಳೆಂದೂ ಮತ್ತು ಅವಳನ್ನು ಶೋಧಿಸುವುದರಲ್ಲಿ ಹಾಸ್ಟೆಲಿನ ಬಾವಿಯಲ್ಲಿ ಒಂದು ಶವವು ತೇಲುತ್ತಿದ್ದುದು ಕಂಡು ಬಂದಿತೆಂದು ವರದಿ ಮಾಡಲ್ಪಟ್ಟಿತು. ಕೂಡಲೆ ಪೋಲೀಸರು ಅಲ್ಲಿಗೆ ಆಗಮಿಸಿ ಆ ತೇಲುತ್ತಿದ್ದ ಶವವು ಕುಮಾರಿ ಸೀತಾಳದೆಂದು ಗುರುತಿಸಿದರು. ಪಂಚನಾಮೆ ಹಾಗೂ ವೈದ್ಯಕೀಯ ಶವ ಪರೀಕ್ಷೆಯನ್ನು ಕುಮಾರಿ ಸೀತಾಳ ತಂದೆಯ ಸಮ್ಮುಖದಲ್ಲಿ ನಡೆಸಲಾಯಿತು. ವೈದ್ಯಕೀಯ ಪರೀಕ್ಷೆಯಿಂದ ಸಾವು ಮುಳುಗಿದ್ದರಿಂದ ಸಂಭವಿಸಿತೆಂದು ಮತ್ತು ಬೇರೆ ಯಾವ ಕಾರಣಗಳಿಂದಾದರೂ ಸಾವು ಸಂಭವಿಸಿರಬಹುದೆಂಬುದನ್ನು ಶಂಕಿಸಲು ಯಾವ ಆಧಾರವೂ ಇಲ್ಲವೆಂದು ತಿಳಿದು ಬಂದಿದೆ. ಈ ಸಾವಿನ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಲು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಪುತ್ತೂರು, ಇವರಿಗೆ ನಿರ್ದೇಶಿಸಲಾಗಿದೆ. ಅವರ ವರದಿ ಇನ್ನೂ ಬಂದಿಲ್ಲ. ಈ ವಿಷಯದ ಬಗ್ಗೆ ಇನ್ನೂ ತನಿಖೆ ನಡೆಯುತ್ತಿದೆ.

ಶ್ರೀ ಪಿ.ಎಫ್. ರೋಡ್ರಿಗ್ಸ್.—ಮಾನ್ಯ ಅಧ್ಯಕ್ಷರೇ, ಈ ಹಾಸ್ಟೆಲ್‌ನ ಪೇಲ್ವಿಚಾರಕರು ಕುಮಾರಿ ಸೀತಾ ಕಾಣೆಯಾಗಿದ್ದಾಳೆಂದು ತಿಳಿಸಿದಮೇಲೆ, ಅವಳ ಶೋಧನೆ ಕಾರ್ಯ ಯಾವಾಗಿನಿಂದ ಪ್ರಾರಂಭವಾಯಿತು? ಆಂದರೆ ಜಿನೇ ತಾರೀಖು ಪ್ರಾರಂಭವಾಯಿತೆ? ಅಥವಾ ೬ನೇ ತಾರೀಖು ಪ್ರಾರಂಭವಾಯಿತೆ? ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ತಿಳಿಸುತ್ತಾರೆಯೆ?

ಶ್ರೀ ಆರ್. ಗುಂಡೂರಾವ್.—ಜಿನೇ ತಾರೀಖು ಮುಂಜಾನೆಯಿಂದ ಈ ಹುಡುಗಿ ಕಾಣೆಯಾಗಿದ್ದಾಳೆಂದು ವರದಿ ಬಂತು. ಆದರ ಪ್ರಕಾರ ಶೋಧನಾ ಕಾರ್ಯ ಪ್ರಾರಂಭ ಮಾಡಿದ್ದಾರೆ. ಆದರೆ ಇಲ್ಲಿ ಯಾವ ತಾರೀಖಿನಿಂದ ಎಂದು ಇಲ್ಲ. ತಮಗೆ ಬೇಕಾದರೆ ತರಿಸಿಕೊಡುತ್ತೇನೆ. ಸಾಮಾನ್ಯವಾಗಿ ದೂರು ಬಂದ ದಿವಸ ಶೋಧನಾ ಕಾರ್ಯ ಪ್ರಾರಂಭ ಮಾಡಿರ ತ್ತಾರೆ, ಇಲ್ಲದಿದ್ದರೆ ಅವತ್ತಿನ ಮಾರನೆ ದಿವಸದಿಂದ ಪ್ರಾರಂಭಿಸಿರುತ್ತಾರೆ.

ಶ್ರೀ ಪಿ.ಎಫ್. ರೋಡ್ರಿಗ್ಸ್.—ಜಿನೇ ತಾರೀಖು ಶಾಲೆಗೆ ಈ ಹುಡುಗಿ ಹೋಗಿದ್ದಳೆ? ಪ್ರತಿದಿನ ಮಧ್ಯಾಹ್ನ ಹಾಸ್ಟೆಲ್‌ಗೆ ಊಟಕ್ಕೆ ಬರುತ್ತಿದ್ದಳೆ? ಹಾಗೆ ಬರದಿದ್ದರೆ ಮೇಲ್ವಿಚಾರಕರು ಏನಂ ಮಚ್ಚರಿಕೆ ತೆಗೆದುಕೊಂಡಿದ್ದರು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ಈ ಹುಡುಗಿ ಪ್ರತಿದಿನ ಹಾಸ್ಟೆಲ್‌ಗೆ ಊಟಕ್ಕೆ ಸರಿಯಾಗಿ ಬರುತ್ತಿದ್ದಳೆ? ಇಲ್ಲವೆ? ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಈ ವಿಚಾರ ಇನ್ನೂ ತನಿಖೆ ಯಾಗುತ್ತಿದೆ. ಆಲ್ಲಿಂದ ವರದಿ ಬರಬೇಕು. ಪೋಲೀಸರಿಗೆ ಪ್ರಕಾರ ಸಿಕ್ಕಿದ ಮೇಲೆ ಈ ತನಿಖೆ ಕಾರ್ಯ ನಡೆಯುತ್ತಿದೆ, ನೋಡೋಣ.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ಘಟನೆ ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕದ್ದು. ಕುಮಾರಿ ಸೀತಾ ಬೆಲ್ ಹೊಡೆಯುತ್ತಿದ್ದ ಹುಡುಗಿ. ಆದರೆ ಜಿನೇ ತಾರೀಖು ಮುಂಜಾನೆ ಬೆಲ್ ಹೊಡೆಯುವುದಕ್ಕೆ ಹುಡುಗಿ ಬರಲಿಲ್ಲ. ಸರಿ, ಹುಡುಕುವುದಕ್ಕೆ ಪ್ರಾರಂಭ ಮಾಡಿದರು. ನಂತರ ಆಕೆಯ ಶವ ಭಾವಿ ಯಲ್ಲಿತ್ತು ಎಂದು ಗೊತ್ತಾಯಿತು? ಈ ಹಾಸ್ಟೆಲ್ ಹುಡುಗಿಯರು ಆಕೆಯನ್ನು ದುರ್ವ್ಯವಹಾರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ಸೀತಾ ಆಗಾಗ್ಗೆ ಇಂಥ ಅನ್ಯಾಯಕ್ಕೆ ಒಳಗಾಗಿದ್ದಾಳೆಂದು ಹೇಳುವುದಕ್ಕೆ ರುಜುವಾತು ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ಇವರ ಬಿಂಸೆಯನ್ನು ತಪ್ಪಿಸಿ

ಕೊಳ್ಳುವುದಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ಆ ಹಾಸ್ಟಲ್ ಸೂಪರಿಂಟೆಂಡೆಂಟ್, ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್, ಇನ್ನೂ ಮುಂತಾದವರು ಒಳಗಾಗಿದ್ದಾರೆ ಆದ್ದರಿಂದ ಇದರ ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗಬೇಕೆಂದರೆ ಕೂಡಲೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೆಲ್ಲಾ ಅಲ್ಲಿಂದ ಟ್ರಾನ್ಸ್‌ಫರ್ ಮಾಡಿಸಬೇಕೆಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಎಫ್. ರೋಡ್ರಿಗ್ಸ್.—ಈ ಹೆಣ ಸಿಕ್ಕಿದ ಮೇಲೆ ಕಾನೂನು ಪ್ರಕಾರ inquest ಮಾಡಬೇಕಾಗುತ್ತದೆ. ಆಗ ರಿಪೋರ್ಟ್ ತಯಾರು ಮಾಡುತ್ತಾರೆ.ಆ ರಿಪೋರ್ಟ್‌ನಲ್ಲಿ ಈ ಕುಮಾರಿ ಸೀತಾ ಹಲ್ಲಿನಿಂದ ಕಡಿದಿತ್ತೆ, ಕೈ ಮುಷ್ಠಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿತ್ತೆ ? ಎಂಬುದು ಏನಾದರೂ ತಿಳಿದು ಬಂದಿದೆಯೆ ?

ಶ್ರೀ ಆರ್. ಗುಂಡೂರಾವ್.—ನಾನು ಈಗಾಗಲೇ ಹೇಳಿದ್ದೇನೆ. ತನಿಖೆ ನಡೆಯುತ್ತಿದೆ ಅದರ ವರದಿ ಬಂದಕೂಡಲೇ ಡೀಟೈಲ್ಡ್ ರಿಪೋರ್ಟ್‌ನ್ನು ಸಭೆ ಮುಂದಿಡುತ್ತೇನೆ.

FINANCIAL BUSINESS

Presentation of supplementary estimates 1980-81

SRI M. VEERAPPA MOILY (Minister for Finance).—Sir, I beg to present the Supplementary Estimates for the year 1980-81 as required under Article 205 (1) of the Constitution of India.

MR. SPEAKER.—Supplementary estimates presented.

Introduction of Bills.

THE MYSORE ELECTRICAL INDUSTRIES LIMITED (AQUISATION OF SHARES) (AMENDMENT), BILL, 1981.

Leave to Introduce

SRI R. GUNDU RAO (Chief Minister) .—Sir, I beg to move,

" that leave be granted to introduce the Mysore Electrical Industries Limited, (Acquisition of Shares) (Amendment) Bill, 1981 "

MR. SPEAKER.—Motion moved. The question is,

" that leave be granted to introduce the Mysore Electrical Industries Limited (Acquisition of Shares) (Amendment) Bill, 1981 "

The motion was adopted and the leave was granted.

SRI R. GUNDU RAO.—Sir, I beg to introduce,

" The Mysore Electrical Industries Limited (Acquisition of Shares) (Amendment) Bill, 1981 "

MR. SPEAKER.—The Bill is introduced.